# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತಗಂಗೋತ್ರಿ, ಮೈಸೂರು–570 006.**

ಸಂಖ್ಯೆ : ಕರಾಮುವಿ/ಅಸಾವಿ/05-19/2018-19 ದಿನಾಂಕ : 19/01/2019

## ದರಪಟ್ಟಿ ಆಹ್ವಾನದ ಬಗೆಗೆ

ವಿಷಯ : ಶೈಕ್ಷಣಿಕ ಸಮಾಲೋಚಕರ ಕೈಪಿಡಿ ( **Manual for Academic Counselor** ) ಯನ್ನು ಮುದ್ರಿಸಿ ಸರಬರಾಜು ಮಾಡಲು ದರಪಟ್ಟಿಕೋರಿ.

ಉಲ್ಲೇಖ: ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ :-09/01/2019 [ಕಂಡಿಕೆ- 10]

**********

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಡೀನ್(ಶೈಕ್ಷಣಿಕ) ವಿಭಾಗವು ಶೈಕ್ಷಣಿಕ ಸಮಾಲೋಚಕರ ಕೈಪಿಡಿ (Manual for Academic Counselor) ಯನ್ನು ಯುಜಿಸಿ ದೂರ ಶಿಕ್ಷಣ ನಿಯಮವಳಿ 2017ರ ಪ್ರಕಾರ ಸಿದ್ಧಪಡಿಸಿದ್ದು ಸದರಿ ಕೈಪಿಡಿಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಳ್ಳುವ ಸಂಬಂಧ ಮುದ್ರಣವಾಗಬೇಕಾಗಿರುವ ಪ್ರತಿಗಳ ಒಳ ಪುಟಗಳಿಗೆ ಮತ್ತು ರಕ್ಷಾಪುಟಗಳಿಗೆ ಬಳಸಬೇಕಾದ ಕಾಗದದ Specification ಈ ಕೆಳಕಂಡಂತೆ ತಿಳಿಸಲಾಗಿದೆ. ಸದರಿ ಪ್ರತಿಗಳನ್ನು ಮುದ್ರಿಸಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿಗೆ ಸರಬರಾಜು ಮಾಡಲು ತಗಲುವ ಕನಿಷ್ಠತಮ ದರವನ್ನು (ಎಲ್ಲಾ ತೆರಿಗೆ ಸೇರಿದಂತೆ) ದರಪಟ್ಟಿ ನೀಡಲು ಕೋರಲಾಗಿದೆ.

**ಮುದ್ರಣವಾಗಬೇಕಾದ ಪುಸ್ತಕಗಳ ವಿವರ**

| ಕ್ರ.ಸಂ | ವರ್ಷ | ವಿಷಯ | ಪುಟ ಸಂಖ್ಯೆ | ಪ್ರತಿಗಳು |
|---|---|---|---|---|
| 01 | 2018-19 | ಶೈಕ್ಷಣಿಕ ಸಮಾಲೋಚಕರ ಕೈಪಿಡಿ | 32 | 400 |

1. ಮುದ್ರಣವಾಗಬೇಕಾಗಿರುವ ಪುಸ್ತಿಕೆಗಳ ಆಳತೆ ಡೆಮಿ 1/4
2. ಸದರಿ ಪುಸ್ತಿಕೆಗಳಿಗೆ ಒಳಪುಟ 60 ಜಿ.ಎಸ್.ಎಂ ತೂಕದ ಎಂ.ಪಿ.ಎಂ/ ಟಿ.ಎನ್.ಪಿ.ಎಲ್ ಮ್ಯಾಪ್‌ಲಿಥೋ ಕಾಗದ ಬಳಸಿ ಒಂದು ಬಣ್ಣದಲ್ಲಿ ಮುದ್ರಿಸಬೇಕಾಗಿರುತ್ತದೆ.
3. ಸದರಿ ಪುಸ್ತಿಕೆಗಳ ರಕ್ಷಾಪುಟಗಳಿಗೆ 170 ಜಿ.ಎಸ್.ಎಂ ತೂಕದ ಇಂಡಿಯನ್ ಮ್ಯಾಟ್ ಆರ್ಟ್ ಕಾರ್ಡ್ ಬಳಸಿ ದ್ವಿವರ್ಣದಲ್ಲಿ ಮುದ್ರಿಸಿ ಮ್ಯಾಟ್ ಲ್ಯಾಮಿನೇಷನ್ ನೊಂದಿಗೆ ಸೆಂಟರ್ ಪಿನ್(Center pin) ಮಾಡಬೇಕಾಗುತ್ತದೆ.

**ನಿಯಮ ಮತ್ತು ಷರತ್ತುಗಳು**

1. ಮುದ್ರಣದ ವಿಷಯವುಳ್ಳ ಸಿ.ಡಿ ಮತ್ತು ಡೆಮಿಯನ್ನು ಮುದ್ರಣದ ಕಾರ್ಯಾದೇಶದೊಂದಿಗೆ ವಿ.ವಿ ನಿಲಯವೇ ನೀಡುತ್ತದೆ. ಯಾವ ಬದಲಾವಣೆ ಇಲ್ಲದಂತೆ ಅಚ್ಚುಕಟ್ಟಾಗಿ ಮುದ್ರಿಸಿ ಸರಬರಾಜು ಮಾಡಬೇಕಾಗುತ್ತದೆ.
2. ಸದರಿ ಪುಸ್ತಿಕೆಗಳನ್ನು ವಿ.ವಿ. ನಿಲಯ ಸೂಚಿಸಿದ Specification ರೀತ್ಯಾ ನಿಗದಿತ ದಿನಾಂಕದೊಳಗೆ ಮುದ್ರಿಸಿ ಸರಬರಾಜು ಮಾಡಲು ಸಿದ್ಧರಿರಬೇಕು.
3. ಈ ಪುಸ್ತಿಕೆ ಮುದ್ರಣಕ್ಕೆ ನಿಗದಿಪಡಿಸಿರುವ ದರಗಳು ಇದೇ ವಿಷಯವಾಗಿ ಮತ್ತೊಮ್ಮೆ ದರಪಟ್ಟಿ ಆಹ್ವಾನಿಸುವವರೆಗೆ ಅಥವ ಒಂದು ವರ್ಷದ ಅವಧಿವರೆಗೆ(365 ದಿನಗಳು) ಚಾಲ್ತಿಯಲ್ಲಿರುತ್ತದೆ.
4. ಸದರಿ ದರಪಟ್ಟಿಯನ್ನು ಅಂಗೀಕರಿಸುವ / ತಿರಸ್ಕರಿಸುವ ಹಕ್ಕನ್ನು ವಿ.ವಿ.ನಿಲಯವು ಹೊಂದಿರುತ್ತದೆ.
5. ದರಪಟ್ಟಿಯನ್ನು ಮೊಹರಾದ ಲಕೋಟೆಯಲ್ಲಿಟ್ಟು **"ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2018-19 ರ ಶೈಕ್ಷಣಿಕ ಸಮಾಲೋಚಕರ ಕೈಪಿಡಿಗಳನ್ನು ಮುದ್ರಿಸಿ ಸರಬರಾಜು ಮಾಡುವ ಸಂಬಂಧದ ದರಪಟ್ಟಿ"** ಎಂಬುದಾಗಿ ಶೀರ್ಷಿಕೆಯನ್ನು ಬರೆದು ದಿನಾಂಕ 29-01-19 ರ ಸಂಜೆ : 05ಗಂಟೆ ರೊಳಗೆ **"ಕುಲಸಚಿವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು"** . ಇವರ ಹೆಸರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸುವುದು.

ಆದೇಶದ ಮೇರೆಗೆ

ಕುಲಸಚಿವರು

**ಪ್ರತಿಗಳು** :-

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕರಾಮುವಿ, ಮೈಸೂರು,
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
3. ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು.
4. ಕಛೇರಿ ಪ್ರತಿ.